ಶ್ರೀ ಬಿ. ಸೋಮಶೇಖರ್.—ವಿಶ್ವಬ್ಯಾಂಕಿನಿಂದ ನೆರವು ಪಡೆದು, ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆ ಮೂಲಕ ಪ್ರತಿಯೊಂದು ಜಿಲ್ಲೆಗಳಲ್ಲೂ ಹಣ್ಣು ಸಂಸ್ಕರಣ ಘಟಕಗಳನ್ನು ಸ್ಥಾಪನೆ ಮಾಡುವ ಯೋಜನೆ ಸರ್ಕಾರಕ್ಕೆ ಇದೆ.

ಸಂಚಾರಿ ಪಶುವೈದ್ಯ ಘಟಕವನ್ನು ಸ್ಥಾಪಿಸುವ ಬಗ್ಗೆ

೧೧೮೧. ಶ್ರೀ ಬಿ. ಸ್ವಾಮಿರಾವ್ (ಹೊಸನಗರ).—ಮಾನ್ಯ ಪಶುಸಂಗೋಪನೆ ಮಂತ್ರಿ ಪಶು ವೈದ್ಯ ಸೇವಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊಸನಗರ ತಾಲ್ಲೂಕಿನಲ್ಲಿ ಸಂಚಾರಿ ಪಶುವೈದ್ಯ ಘಟಕವನ್ನು ಒದಗಿಸದಿರಲು ಕಾರಣಗಳೇನು?

ಆ) ಸದರಿ ಸಂಚಾರಿ ಘಟಕವನ್ನು ಯಾವಾಗ ಒದಗಿಸಲಾಗುವುದು?

ಶ್ರೀ ಸಿದ್ದರಾಮಯ್ಯ (ಪಶುಸಂಗೋಪನೆ ಮಂತ್ರಿ ಪಶುವೈದ್ಯ ಸೇವಾ ರಾಜ್ಯ ಸಚಿವರು).—

ಅ) ಹೊಸನಗರ ತಾಲ್ಲೂಕಿನಲ್ಲಿ ಸಂಚಾರಿ ಪಶುವೈದ್ಯಶಾಲೆಯನ್ನು ತೆರೆಯುವ ಪ್ರಸ್ತಾಪ ಸರ್ಕಾರದ ಪರಿಶೀಲನೆಯಲ್ಲಿದೆ, ಆದರೆ ಹಣವ ತೊಂದರೆಯಿಂದಾಗಿ ಒದಗಿಸಲು ಸಾಧ್ಯವಾಗಿಲ್ಲ.

ಆ) ಮುಂಬರುವ ವರ್ಷಗಳಲ್ಲಿ ಪರಿಗಣಿಸಲಾಗುವುದು.

ಶ್ರೀ ಬಿ. ಸ್ವಾಮಿರಾವ್.—ಮಾನ್ಯ ಅಧ್ಯಕ್ಷರೆ, ಕಳೆದ ವರ್ಷ ಕೂಡ ಇದೇ ತರಹ ಉತ್ತರವನ್ನು ಕೊಟ್ಟಿದ್ದರು. ಮುಂದಿನ ವರ್ಷವೂ ಕೂಡ ಇದೇ ರೀತಿಯ ಉತ್ತರ ಬರಬಹುದೆಂದು ನಿರೀಕ್ಷೆ ಮಾಡುತ್ತೇನೆ. ಯಾವ ತಾರೀಖಿನಲ್ಲಿ ಮಾಡಲಿತ್ತೀರಾ ಎನ್ನುವುದನ್ನು ನಿರ್ದಿಷ್ಟವಾಗಿ ಹೇಳಿದರೆ ಒಳ್ಳೆಯದಾಗುತ್ತದೆ.

ಶ್ರೀ ಸಿದ್ಧರಾಮಯ್ಯ.—ಸ್ವಾಮಿ, ಕಳೆದ ವರ್ಷ ಈ ರೀತಿಯ ಉತ್ತರ ಕೊಟ್ಟಿರಲಿಲ್ಲ. ಯಾವ ತಾರೀಖು ಎಂದು ನಿರ್ದಿಷ್ಟವಾಗಿ ಹೇಳುವುದಕ್ಕಾಗುವುದಿಲ್ಲ. ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ ಮೂಲಕ ಸಂಚಾರಿ ಪಶುವೈದ್ಯ ಶಾಲೆಗಳನ್ನು ತೆರೆಯುವ ಉದ್ದೇಶ ಸರ್ಕಾರಕ್ಕೆ ಇದಾವುದರಿಂದ ಹೊಸನಗರ ತಾಲ್ಲೂಕಿಗೆ ಆದ್ಯತೆ ಮೇರೆಗೆ ಕೊಡಲಿಕ್ಕೆ ಪ್ರಯತ್ನ ಮಾಡಲಾಗುವುದು.

ರಾಜ್ಯದಲ್ಲಿ ಗಂತ್ರಿಗೆ ಆಧಾರದ ಮೇರೆಗೆ ನೇಮಿಸಿಕೊಂಡಿರುವ ಉಪಾಧ್ಯಾಯರುಗಳ ಸೇವೆಗಳನ್ನು ಖಾಯಂ ಗೊಳಿಸುವುದು

೧೫೨೩. ಶ್ರೀ ಬಿ.ಎ ಉಟ್ಟಿನ (ಕುಂದಗೋಳ),—ಮಾನ್ಯ ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಂಡ ಪ್ರಾಥಮಿಕ ಹಾಗೂ ಪ್ರೌಢಶಾಲಾ ಶಿಕ್ಷಕರ ಸಂಖ್ಯೆ ಎಷ್ಟು?

ಆ) ಅವರನ್ನು ಖಾಯಂಗೊಳಿಸಲು ಸರ್ಕಾರದವರಂ ತೆಗೆದುಕೊಂಡ ಕ್ರಮಗಳೇನು?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಮಾನ್ಯ ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ರಾಜ್ಯ ಸಚಿವರು).—

ಅ) ಪ್ರಾಥಮಿಕ ಶಾಲಾ ಶಿಕ್ಷಕರುಗಳು ೩೭೨೬
ಪ್ರೌಢಶಾಲಾ ಶಿಕ್ಷಕರುಗಳು ೩೩೮೦

ಆ) ಇವರುಗಳ ಸೇವೆಯನ್ನು ಖಾಯಂ ಗೊಳಿಸಲು ನಿಯಮಗಳ ರೀತ್ಯಾ ಅವಕಾಶವಿರುವುದಿಲ್ಲ.

ಶ್ರೀ ಬಿ. ಎ. ಉಟ್ಟಿನ.—ಮಾನ್ಯ ಅಧ್ಯಕ್ಷರೇ, ಹೊಸದಾಗಿ ಶಿಕ್ಷಕರನ್ನು ನೇಮಿಸಿಕೊಳ್ಳುತಕ್ಕಂಥ ಸಂದರ್ಭದಲ್ಲಿ ಗುತ್ತಿಗೆ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿರುವ ಶಿಕ್ಷಕರಿಗೆ ಪ್ರಾಶಸ್ತ್ಯ ಕೊಡಲಾಗುವುದೆ? ಯಾವ ರೀತಿಯ ಪ್ರಾಶಸ್ತ್ಯ ಕೊಡಲಾಗುವುದು?